# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577002.
ದೂರವಾಣಿ ಸಂಖ್ಯೆ: 08192-208025


ಸಂಖ್ಯೆ: ದಾವಿವಿ/ಶೈ/327 /2017-18 | 5391 ದಿನಾಂಕ:25/11/2017

## ಅಧಿಸೂಚನೆ

ವಿಷಯ: ವಿಶ್ವವಿದ್ಯಾನಿಲಯದ 2017-18ನೇ ಸಾಲಿನ ಎರಡು ವರ್ಷದ ಬಿ.ಇಡಿ. ಕೋರ್ಸ್‌ನ ಪ್ರವೇಶಾತಿ ಸೂಚನೆಗಳು, ಶುಲ್ಕ ಹಾಗೂ ಶೈಕ್ಷಣಿಕ ವೇಳಾಪಟ್ಟಿ ಬಗ್ಗೆ.

ಉಲ್ಲೇಖ: 1. ಡೀನರು, ಶಿಕ್ಷಣ ನಿಕಾಯ - ಇವರ ಪತ್ರ ಸಂಖ್ಯೆ: ಬಿ.ಇಡಿ. 959/ 2017-18, ದಿನಾಂಕ:21-11-2017.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24-11-2017.

*******

### ವಿಶ್ವವಿದ್ಯಾನಿಲಯದ 02 ವರ್ಷದ ಬಿ.ಇಡಿ. ಕೋರ್ಸ್‌ನ 2017-18ನೇ ಸಾಲಿನ (ಸೆಮಿಸ್ಟರ್ ಪದ್ಧತಿ) ಪ್ರವೇಶಾತಿ ಸೂಚನೆಗಳು ಹಾಗೂ ಶೈಕ್ಷಣಿಕ ವೇಳಾಪಟ್ಟಿಯ ವಿವರಗಳು

### ಪ್ರವೇಶಾತಿ ದಿನಾಂಕದ ವಿವರಗಳು

| | | |
|---|---|---|
| 01 | Last date for Admissions (without Penal Fee) | 16-12-2017 |
| 02 | Last date for Admissions (with a Penal Fee of Rs. 500/-) | 26-12-2017 |
| 03 | Last date for submission of subsequent records for admission approval. | 30-12-2017 |

### ಶೈಕ್ಷಣಿಕ ವೇಳಾಪಟ್ಟಿ

| Sl. No. | Particulars | Dates |
|---|---|---|
| | **I & III Semesters** | |
| 01 | Commencement of Academic Year 2017-18 | 01-01-2018 |
| 02 | Commencement of Odd Semester Classes | 01-01-2018 |
| 03 | Closing of Odd Semester Classes | 30-04-2018 |
| 04 | Examination & Summer Vacation | 02-05-2018 to 30-06-2018 |
| | **II & IV Semesters** | |
| 01 | Commencement of Even Semester Classes | 01-07-2018 |
| 02 | Closing of Even Semester Classes | 31-10-2018 |
| 03 | Examination &Vacation | 02-11-2018 to 31-12-2018 |

**ಸೂಚನೆಗಳು:**

1. ವಿಶ್ವವಿದ್ಯಾನಿಲಯದ 2017-18ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ತರಗತಿಗಳು ಪ್ರಾರಂಭವಾಗುವ ದಿನಾಂಕ: 01-01-2018.
2. ಶೈಕ್ಷಣಿಕ ವೇಳಾಪಟ್ಟಿಯ ದಿನಾಂಕಗಳಲ್ಲಿ ಸಾರ್ವತ್ರಿಕ/ಅನಿರೀಕ್ಷಿತ ರಜೆ ಬಂದಲ್ಲಿ, ತತ್ಸಂಬಂಧದ ಕಾರ್ಯಕ್ರಮಗಳು ಮುಂದಿನ ದಿನ ಪ್ರಾರಂಭವಾಗುತ್ತವೆ.
3. ಸರ್ಕಾರಿ ಕೋಟಾದಡಿ ಸೀಟುಗಳನ್ನು ಕೇಂದ್ರೀಕೃತ ದಾಖಲಾತಿ ಘಟಕ, ಶಿಕ್ಷಣ ಇಲಾಖೆ ನಿಗದಿಪಡಿಸಿದ ದಿನಾಂಕದೊಳಗೆ ಪ್ರವೇಶ ಮಾಡಿಕೊಳ್ಳತಕ್ಕದ್ದು.
4. ಪ್ರವೇಶಾನುಮೋದನೆ ಪಟ್ಟಿಯನ್ನು ದಿನಾಂಕ: 30-12-2017 ರೊಳಗೆ ವಿಶ್ವವಿದ್ಯಾನಿಲಯದ ಅನುಮೋದನೆಗೆ ಸಲ್ಲಿಸಲು ತಿಳಿಸಲಾಗಿದೆ. ಇಲ್ಲದಿದ್ದಲ್ಲಿ ರೂ:10,000/- ದಂಡ ಶುಲ್ಕ ವಸೂಲಾತಿಗೆ ಕ್ರಮಕೈಗೊಳ್ಳಲಾಗುವುದು.
5. ಖಾಲಿ ಉಳಿದ ಸರ್ಕಾರಿ ಸೀಟುಗಳನ್ನು ಸರ್ಕಾರದ ಹಾಗೂ ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೆ ಪ್ರವೇಶಾತಿ ಮಾಡಿಕೊಳ್ಳುವಂತಿಲ್ಲ.
6. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಇತರೆ ರಾಜ್ಯಗಳ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು.
7. ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಸಂಬಂಧ ಕುಲಸಚಿವರು (ಪರೀಕ್ಷಾಂಗ) ಇವರು ಅಧಿಸೂಚಿಸುವ ಪರೀಕ್ಷಾ ವೇಳಾಪಟ್ಟಿಯನ್ನು ಅನುಸರಿಸತಕ್ಕದ್ದು.

**ಎರಡು ವರ್ಷದ ಬಿ.ಇಡಿ. ಕೋರ್ಸ್‌ನ 2017-18ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಕಾಲೇಜುಗಳ್‌ ಪ್ರವೇಶ ನೀಡುವಾಗ ಪಾಲಿಸಬೇಕಾದ ಮಾರ್ಗಸೂಚಿಗಳು**

1. ಸರ್ಕಾರದ ಅನುಮತಿ ಪಡೆಯದೆ ಸರ್ಕಾರಿ ಕೋಟಾದಡಿಯ ಸೀಟುಗಳನ್ನು ಆಡಳಿತ ಮಂಡಳಿಯು ಭರ್ತಿ ಮಾಡಿಕೊಳ್ಳಬಾರದು.
2. ಸರ್ಕಾರದ 2017-18ರ ಬಿ.ಇಡಿ. ಪ್ರವೇಶ ನಿಯಮಾವಳಿಯಲ್ಲಿ ಸೂಚಿಸಿರುವಂತೆ ಪದವಿ ಮಟ್ಟದಲ್ಲಿ ಅಧ್ಯಯನ ಮಾಡಿದ ಭಾಷಾ ಮತ್ತು ಐಚ್ಛಿಕ ವಿಷಯಗಳಿಗನುಸಾರವಾಗಿ, ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇವರು ನಿಗದಿಗೊಳಿಸಿರುವ ಬಿ.ಇಡಿ., ಬೋಧನಾ ವಿನಿಯಮದಂತೆ ಪ್ರವೇಶ ಮಾಡಿಕೊಳ್ಳುವುದು.
3. ಬಿ.ಇಡಿ. ಕೋರ್ಸಿಗೆ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಅಥವಾ ಸ್ನಾತಕೋತ್ತರ ಪದವಿಗಳಲ್ಲಿ (ಕೇಂದ್ರೀಕೃತ ದಾಖಲಾತಿ ಘಟಕದಿಂದ ಸೂಚಿಸಲ್ಪಟ್ಟಿರುವ ಪದವಿಗಳು) ಅಥವಾ ತತ್ಸಮಾನ ಪದವಿಗಳಲ್ಲಿ ವಿದ್ಯಾರ್ಹತೆಯನ್ನು ಹೊಂದಿರಬೇಕು. ಅಲ್ಲದೆ, ಪ್ರವೇಶಾತಿ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ, ಪ್ರವರ್ಗ-1, ಅಂಗವಿಕಲ ವಿದ್ಯಾರ್ಥಿಗಳು ಹಾಗೂ ಹೈದ್ರಾಬಾದ್-ಕರ್ನಾಟಕ ಅನುಚ್ಛೇಧ 371 (ಜೆ) ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ರೋಸ್ಟರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಸ್ನಾತಕ ಪದವಿಯ ವಿದ್ಯಾರ್ಥಿಗಳು ಬಿ.ಇಡಿ. ಪದವಿಗೆ ಪ್ರವೇಶ ಪಡೆಯಲು ವಿದ್ಯಾರ್ಹತೆ ಎಸ್.ಸಿ./ ಎಸ್.ಟಿ. ಪ್ರವರ್ಗ-1 45% ಹಾಗೂ ಸಾಮಾನ್ಯ ವರ್ಗ 50% ಅರ್ಹತೆಯನ್ನು ಹೊಂದಿರಬೇಕು.
5. ಪ್ರತಿ ಪ್ರವರ್ಗದಲ್ಲಿ ಶೇ. 3 ರಷ್ಟು ಸೀಟುಗಳನ್ನು ಪಿ.ಹೆಚ್. ಕೋಟಾ ನಿಯಮಗಳನುಸಾರ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸುವುದು ಕಡ್ಡಾಯವಾಗಿರುತ್ತದೆ. (ಶೇಕಡ 1 ರಷ್ಟು ದೃಷ್ಟಿದೋಷವುಳ್ಳವರಿಗೆ ಶೇಕಡ 1 ರಷ್ಟು ಶ್ರವಣದೋಷವುಳ್ಳವರಿಗೆ ಮತ್ತು ಶೇಕಡ 1 ರಷ್ಟು ಅರ್ಥೋಪೆಡಿಕ್ ಅಂಗವಿಕಲರಿಗೆ) ಹಾಗೂ ಅಂತಹ ವಿದ್ಯಾರ್ಥಿಗಳು ಅರ್ಹ ಪ್ರಮಾಣ ಪತ್ರದ ಪ್ರತಿಯನ್ನು ವಿಶ್ವವಿದ್ಯಾನಿಲಯದ ಪರಿಶೀಲನೆಗೆ ಪ್ರವೇಶಾತಿ ಪಟ್ಟಿಯೊಂದಿಗೆ ಸಲ್ಲಿಸುವುದು.
6. ಅಭ್ಯರ್ಥಿಯು ಅಂಗವಿಕಲತೆಯ ಕೋಟಾದಲ್ಲಿ ಆಯ್ಕೆಯಾಗಲು ಅಂಗವಿಕಲತೆ ಪ್ರಮಾಣವು ಶೇ.40 ರಿಂದ 75 ರಷ್ಟು ಇರತಕ್ಕದ್ದು, ಇಂತಹ ಅಭ್ಯರ್ಥಿಗಳು ಜಿಲ್ಲಾ ವೈದ್ಯರು/ಡಿಸ್ಟ್ರಿಕ್ಟ್ ಸರ್ಜನ್ ಹುದ್ದೆಗೆ ಕಡಿಮೆ ಇಲ್ಲದ ವೈದ್ಯಕೀಯ ಅಧಿಕಾರಿಗಳು ನೀಡುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
7. ಅಭ್ಯರ್ಥಿಗಳನ್ನು ಪ್ರವೇಶಾತಿಗೆ ನೊಂದಾಯಿಸಿಕೊಳ್ಳುವಾಗ ವಿಶ್ವವಿದ್ಯಾನಿಲಯದ ನಿಯಮಗಳು/ಸರ್ಕಾರದ ಅರ್ಹತಾ ನಿಯಮಗಳನ್ನು ಹಾಗೂ ಮೀಸಲಾತಿಯ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ಜರುಗಿಸತಕ್ಕದ್ದು.
8. ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ದಾಖಲಾಗಲು ಬರುವ ಅಭ್ಯರ್ಥಿಗಳು ದಾಖಲಾತಿ ಘಟಕವು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪ್ರವೇಶ ಪಡೆದಿರತಕ್ಕದ್ದು.
9. ಆಡಳಿತ ಮಂಡಳಿ ಸೀಟುಗಳಿಗೆ ದಂಡ ಶುಲ್ಕವಿಲ್ಲದೆ ಪ್ರವೇಶ ಪಡೆಯಲು ಕೊನೆಯ ದಿನಾಂಕ:16/12/2017. ಅಲ್ಲದೆ, ರೂ:500/-ಗಳ ದಂಡಶುಲ್ಕದೊಂದಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ:26-12-2017.
10. ಯು.ಜಿ.ಸಿ./ಎನ್.ಸಿ.ಟಿ.ಇ. ನಿಯಮಗಳನುಸಾರ ಪ್ರತಿಯೊಬ್ಬ ಅಭ್ಯರ್ಥಿಯು ವ್ಯಾಸಂಗದ ಅವಧಿಯಲ್ಲಿ ಶೇ.85ರಷ್ಟು ಹಾಜರಾತಿಯನ್ನು ಪಡೆಯಬೇಕೆಂಬುದರ ಬಗ್ಗೆ ಮಾಹಿತಿಯನ್ನು ಕಡ್ಡಾಯವಾಗಿ ನೀಡುವುದಲ್ಲದೆ ಅದಕ್ಕಿಂತ ಕಡಿಮೆ ಹಾಜರಾತಿ ಪಡೆದಲ್ಲಿ, ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಸೂಕ್ತಕ್ರಮ ಕೈಗೊಳ್ಳಬಹುದೆಂದು "ಮುಚ್ಚಳಿಕೆ" ಪತ್ರವನ್ನು ಪಡೆದುಕೊಂಡು, ಸದರಿ ಮುಚ್ಚಳಿಕೆಯನ್ನು ಪ್ರವೇಶಾನುಮೋದನೆ ಪಟ್ಟಿಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.
11. ಹೊರರಾಜ್ಯದ ವಿದ್ಯಾರ್ಥಿಗಳ ಪ್ರವೇಶಗಳನ್ನು ಮಾಡಿಕೊಳ್ಳುವಾಗ ಅಂತಹ ವಿದ್ಯಾರ್ಥಿಗಳು ಪದವಿಯ ಮೂಲ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯದ ಪರಿಶೀಲನೆಗೆ ಸಲ್ಲಿಸಿ, ಅರ್ಹತಾ ಪ್ರಮಾಣಪತ್ರ (**Eligibility Certificate**) ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು. ಅಲ್ಲದೇ, ಪ್ರವೇಶಾನುಮೋದನೆ ಸಮಯದಲ್ಲಿ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾನಿಲಯದಿಂದ ಪಡೆದ ಅರ್ಹತಾ ಪ್ರಮಾಣ ಪತ್ರವನ್ನು ಸಹ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
12. ಕರ್ನಾಟಕದ ಇತರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳುವಾಗ ನಿಯಮಾನುಸಾರ ವಿದ್ಯಾರ್ಥಿಗಳು ಅರ್ಹರೆಂದು ದೃಢಪಡಿಸಿಕೊಳ್ಳುವ ಹೊಣೆ ಪ್ರಾಂಶುಪಾಲರದಾಗಿದೆ. ಪ್ರವೇಶ ಪಡೆಯುವ ಇಂತಹ ವಿದ್ಯಾರ್ಥಿಗಳ ಅರ್ಹತೆಗೆ ಸಂಬಂಧಿಸಿದಂತೆ ವಲಸೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳಿಂದ ಪಡೆದುಕೊಂಡು, ನಂತರ ಪ್ರವೇಶಾನುಮೋದನೆ ಸಮಯದಲ್ಲಿ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.

13. ವಿಶ್ವವಿದ್ಯಾನಿಲಯದ ಸಂಯೋಜನಾ ಆದೇಶದ ಪ್ರಕಾರ ಪ್ರವೇಶ ಮಿತಿಯನ್ನು ಪಾಲಿಸತಕ್ಕದ್ದು. ವಿಶ್ವವಿದ್ಯಾನಿಲಯದಿಂದ ಪಡೆದ ಸಂಯೋಜನಾ ಆದೇಶ ಹಾಗೂ ಎನ್.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದ ಬಗ್ಗೆ ನವೀಕರಣದ ಆದೇಶದ ಪಟ್ಟಿಯನ್ನು ಪ್ರವೇಶಪಟ್ಟಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸುವುದು. ಇಲ್ಲದಿದ್ದಲ್ಲಿ ಪ್ರವೇಶ ಅನುಮೋದನೆಯನ್ನು ತಡೆಹಿಡಿಯಲಾಗುವುದು.
14. ಸರ್ಕಾರವು ನಿಗದಿಗೊಳಿಸಿರುವ ಶುಲ್ಕದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ಅನುಬಂಧ (2) ರಲ್ಲಿ ತಿಳಿಸಿರುವಂತೆ ಪಾವತಿಸತಕ್ಕದ್ದು ಹಾಗೂ ಈ ಶುಲ್ಕಗಳ ವಿವರ ಪಟ್ಟಿಯನ್ನು ಅಧ್ಯಾಪಕರುಗಳ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ಕಡ್ಡಾಯವಾಗಿ ಪ್ರಕಟಿಸುವುದು.
15. ಇತರೆ ರಾಜ್ಯಗಳ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಸಲ್ಲಿಸುವುದು.

**ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾದ ಶುಲ್ಕದ ಮೊತ್ತವನ್ನು ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಂದ ಕ್ರೋಢೀಕರಿಸಿ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ. ಇವರ ಪದನಾಮದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ದಾವಣಗೆರೆ ಮುಖ್ಯ ಶಾಖೆಯಲ್ಲಿ ಎಸ್.ಬಿ.ಐ ಖಾತೆ ಸಂಖ್ಯೆ:64050447113ಗೆ ಪಾವತಿಯಾಗುವಂತೆ ಪ್ರವೇಶಕ್ಕೆ ನಿಗದಿಪಡಿಸಿದ ಅಂತಿಮ ದಿನಾಂಕದ ಮರುದಿನವೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.**

ಆದೇಶದ ಮೇರೆಗೆ,

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002.

ಗೆ,
ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:-

1. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಡೀನರು, ಶಿಕ್ಷಣ ನಿಕಾಯ, ದಾವಣಗೆರೆ ವಿಶ್ವವಿದ್ಯನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಕುಲಪತಿಗಳ/ಕುಲಸಚಿವರ ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಕಛೇರಿ ಪ್ರತಿ.

## 2017–18ನೇ ಸಾಲಿನ ಬಿ.ಇಡಿ. ಶುಲ್ಕದ ವಿವರ

| Sl.No. | Particulars | | Fees | |
|---|---|---|---|---|
| | | | Ist Year (Semester) | Final Year (Semester) |
| 01 | Admission Fee (University) | | 770 | 770 |
| 02 | Registration | | 1650 | - |
| 03 | University Development Fund | | 1210 | 1210 |
| 04 | Sport Development Fund | | 341 | 341 |
| 05 | ECA | | 341 | 341 |
| 06 | Career Guidance Fund | | 39 | 39 |
| 07 | Rovers & Rangers (Scouts & Guides) | | 27 | 27 |
| 08 | Poor Students Fund | | 22 | 22 |
| | Total | | 4400 | 2750-00 |
| | Convocation Fees | Genral | | 666 |
| | | SC/ST/ C-I | | 534 |
| | Other University Fee – 550/- | | | |
| | Out of University Fee – 2,200/- | | | |

Note: **The following fees are to be collected by the concerned colleges & utilized for the purpose for which it is collected.**

| Sl.No | Particulars | Total |
|---|---|---|
| 1 | Sport Development fee | 55 |
| 2 | ECA | 55 |
| 3 | Red Cross | 55 |
| 4 | Skill Development | 110 |
| | Total | 275-00 |

577 002